

# ಮಾಣಿಕ್ಯನ ಕ್ಷಮಾಪಣೆ

## ಮಾಣಿಕ್ಯನ ಕ್ಷಮಾಪಣೆ

ಮಾಣಿಕ್ಯನು ಬಹು ಶ್ರೀಮಂತನು. ಬಹು ಆಸ್ತಿಗಳು ಅವನ ಬಳಿಯಲ್ಲಿ ಇತ್ತು. ಎಲ್ಲವು ಆತನ ಶ್ರಮದಿಂದ ನ್ಯಾಯವಾದ ಸಂಪಾದನೆಯೆ. ಗ್ರಾಮದ ಜನಗಳು ಹೇಗಾದರೂ ಒಂದು ಒಳ್ಳೆ ಸ್ಥಿತಿಗೆ ಬರಬೇಕೆಂಬ ಚಿಂತಿಯುಳ್ಳವನು. ಅವರುಗಳಿಗೆ ಆಗಾಗ್ಗೆ ಸಾಲ ನೀಡಿ ಸಹಾಯಮಾಡುವನು.

ಮಾಣಿಕ್ಯ ತನ್ನ ಭೂಮಿಯನ್ನು ವ್ಯವಸಾಯಕ್ಕೆಂದು ಅನೇಕ ಕಡೆ ಕೊಟ್ಟಿದ್ದನು. ಆದರೆ ಅಂದು ಒಂದು ವರ್ಷದಲ್ಲಿ ಆ ಗ್ರಾಮದಲ್ಲಿ ಮಳೆಯೆ ಇಲ್ಲ. ಪೈರುಗಳೆಲ್ಲಾ ಒಣಗಿ, ವ್ಯವಸಾಯವಿಲ್ಲದೆ ಜನಗಳು ಬಳಲುವ ಸಂಧರ್ಭ ಬಂದು ಬಿಟ್ಟಿತು. ಈ ಸಮಯದಲ್ಲಿ ಹೊಟ್ಟೆಪಾಡಿಗೆ, ಮಾಣಿಕ್ಯ ಬಳಿ ಸಾಲ ಸಹಾಯಕ್ಕಾಗಿ ಅನೇಕರು ಬಂದರು. ಬೇರೆ ಕೆಲಸವನ್ನು ಮಾಡಿ ಬದುಕಿಕೊಳ್ಳಲ್ಲಿ ಎಂಬ ಒಳ್ಳೆ ಆಲೋಚನೆಯಿಂದ ಅನೇಕರಿಗೆ ಸಾಲವನ್ನು ನೀಡಿದನು. ಒಂದು ವರ್ಷದ ನಂತರ ಆ ಸಾಲವನ್ನು ತೀರಿಸುತ್ತೇವೆಂದು ಒಪ್ಪಿಕೊಂಡಂತ ಜನಗಳು ಸಾಲವನ್ನು ಪಡಕೊಂಡು ಹೊರಟರು.

ಸಾಲಪಡಕೊಳ್ಳುವದು ಬಹು ಸುಲಭ. ಆದರೆ ಅದನ್ನು ತೀರಿಸುವದೇ ಬಹು ಕಷ್ಟ. ಇದು ನಮಗೆ ತಿಳಿದಿರುವ ಸಂಗತಿಯೇ. ಆದರೂ ಏನು ಮಾಡೋದು? ಬೇರೆ ದಾರಿಯೇ ಇಲ್ಲದೆ ಅವಸರಕ್ಕೆ ಮಾಣಿಕ್ಯನ ಬಳಿ ಸಾಲಮಾಡಿ ಅದನ್ನು ತೀರಿಸ ಲಾಗದೇ ಬಹು ಕಷ್ಟಪಟ್ಟರು.

ಈ ಒಂದು ಸ್ಥಿತಿಯಲ್ಲಿ ಆ ಒಂದು ಗ್ರಾಮದ ಜನಗಳಿಗೆ ಒಂದು ದೊಡ್ಡ ಆಶ್ಚರ್ಯಕರ ಸಂಗತಿ ಕಾದಿತ್ತು. ಅದು ಮಾಣಿಕ್ಯನ ಮನೆಯ ಬಳಿಯಲ್ಲಿ ತೂಗುಹಾಕಿದ್ದ ಒಂದು ಹಲಗೆಯ ಮಾತು.

'ಇಂದು ಬೆಳಗ್ಗೆ **12.00** ಘಂಟಗೆ ಮಾಣಿಕ್ಯನ ಬಳಿ ಸಾಲಪಡೆ ದಂತವರು ಆತನನ್ನು ಭೇಟಿಮಾಡಿದರೆ ಅವರು ಮಾಡಿದ ಎಲ್ಲಾ ಸಾಲವನ್ನು ರದ್ದುಮಾಡಲಾಗುತ್ತದೆ' ಎಂದು ಆ ಹಲಗೆಯಲ್ಲಿ ಬರೆಯಲ್ಪಟ್ಟಿತ್ತು.

ಏನು ಇದು ನಿಜವೇ? ಎನ್ನುತ್ತಾ ಅನೇಕರು ಮಾಣಿಕ್ಯನ ಮನೆ ಬಾಗಲಿಗೆ ಹಾದುಬಂದರು. ಆದರೆ ಯಾರು ಆ ಮಾತನ್ನು ನಂಬಿದಂತದ್ದಾಗಿ ಕಂಡು ಬರಲಿಲ್ಲ. ಹೀಗೆ ಯಾರಾದರೂ ಪ್ರಕಟಿಸುತ್ತಾರೆಯೇನು? ಸಾಲಮಾಡಿದ ಅನೇಕರು ಸಾಲ ತೀರಿಸದರ ನಿಮಿತ ಹೀಗೆ ಒಂದು ಪ್ರಕಟಣೆಯನ್ನು ಮಾಡಿ ನಮ್ಮನ್ನು ಕರೆ ಕಳುಹಿಸಲು ಉದ್ದೇಶಿಸಿದ್ದಾನೆ ಎಂದು ಊರಿನ ಜನಗಳು ಮಾತಾಡಿಕೊಂಡರು.

"ಮೂರ್ಖ ಜನಗಳಯ್ಯಾ, ಅದೆಷ್ಟು ಜನ ಇಂದು ಅವನಿಗೆ ಸಿಕ್ಕಿಕೊಳ್ಳುತ್ತಾರೋ" ಎಂದು ಕೆಲವರು ಮಾತಾಡಿದರು. ಸಮಯ ಸಾಗುತ್ತಲೇ ಇದೆ. ಆದರೆ ಮಾಣಿಕ್ಯ ಮನೆಗೆ ಹೋಗಿ ಆತನನ್ನು ಧೈರ್ಯವಾಗಿ ಕೇಳಲು ಯಾರು ಮುಂದು ಬರಲಿಲ್ಲ.

ಒಬ್ಬ ಬಡ ರೈತನು ಇದನ್ನು ಕೇಳಿಸಿಕೊಂಡು ಬೇಗಬೇಗನೆ ಮಾಣಿಕ್ಯನ ಮನೆಗೆ ಓಡಿ ಬಂದನು. ಶ್ರೀಮಂತನಾದ ಮಾಣಿಕ್ಯನ ಮನೆ ಬಾಗಲಿನಲ್ಲಿ ಪ್ರಕಟಿಸ ಲ್ಪಟ್ಟಂತ ಅರಿಕೆಯನ್ನು ಒಬ್ಬನನ್ನು ಓದಲು ಕೇಳಿ, ಅದು ನಿಜವಾದುದ್ದೆ? ಎಂದು ತಿಳಿದುಕೊಂಡನು. ಸಮಯ ಈ **11:30** ಬಡ ರೈತನು ತನ್ನ ಎರಡು ವರ್ಷದ ಸಾಲ ಕೊನೆಗೊಳ್ಳುತ್ತದೆ ಎಂದು ಭಾವಿಸಿ ಬಹು ನಂಬಿಕೆಯಿಟ್ಟು ಕಾವಲುಗಾರರ ಅನುಮತಿಯೊಂದಿಗೆ ಆ ಮಾಣಿಕ್ಯ ಮನೆಯ ಒಳಗೆ ಹೋದನು.

ಬಡ ರೈತನ ಕಾರ್ಯವನ್ನು ಕಂಡು ಅಲ್ಲಿದ್ದಂತ ಬಹು ಜನರ ಗುಂಪು ಅವನನ್ನು ಹಾಸ್ಯಮಾಡಿತು.ಆದರೆ ಅವನು ಯಾರನ್ನು ಗಮನಿಸದೇ ಮಾಣಿಕ್ಯನನ್ನು ಸಂಧಿಸಲು ಒಳಗೆ ಹೋಗೇ ಬಿಟ್ಟನು.

ಮಾಣಿಕ್ಯ ಗೋಡೆ ಗಡಿಯಾರದಲ್ಲಿ ಸರಿಯಾಗಿ **12:00** ಘಂಟೆ. ಆಗ ಅವನನ್ನು ಬಿಟ್ಟರೆ ಉಳಿದ ಇನ್ಯಾರು ಆ ಸಮಯದಲ್ಲಿ ಅವನ ಮನೆಯೊಳಗೆ ಬಂದಿರಲಿಲ್ಲ. ನಿಮಿಷಗಳು ಉರುಳಿದವು, ಒಳಗೆ ಹೋದ ರೈತನು ಹಿಂತಿರುಗಿ ಬರಲಿಲ್ಲ.ಮೂರ್ಖ ಇಂದು ಸರಿಯಾಗಿ ಸಿಕ್ಕಿಕೊಂಡನು! ಎಂದು ಅನೇಕರು ಮಾತಾ ಡಲು ಆರಂಭಿಸಿದ್ದರು.

ಆದರೆ ಅಲ್ಲಿ ನಡೆದಂತದ್ದು ಏನು? ಕೆಲವು ಕ್ಷಣಗಳ ನಂತರ ಆ ಬಡ ರೈತನು, ಬಹು ನಗೆಯೊಂದಿಗೆ ಒಂದು ಬರೆಯಲ್ಪಟ್ಟಂತ ಕಾಗದವನ್ನು ಹಿಡಿದುಕೊಂಡು ಹೊರಗೆ ಬಂದನು. ತಕ್ಷಣವೇ ಆ ಮಾಣಿಕ್ಯಯ ಮನೆ ಬಾಗಿಲು ಮುಚ್ಚಲ್ಪಟ್ಟಿತು. ಎಲ್ಲರೂ ಓಡಿ ಬಂದು ಆ ಕಾಗದವನ್ನು ಓದಲು ಪ್ರಾರಂಭಿಸಿದರು. ಶ್ರೀಮಂತನ ಕೈಬರವಣಿಗೆಯೊಂದಿಗೆ ಆ ಬಡ ರೈತನ ಸಾಲವೆಲ್ಲಾ ರದ್ದು ಮಾಡಲ್ಪಟ್ಟಿತ್ತು.

ಏನಿದು? ನಿಜವಾಗಲೂ ನಡೆದಿದ್ದಿಯೇ.ಮಾಣಿಕ್ಯ ಹೀಗೆ ಹೇಳಿದರು ಎಂದು ಅನೇಕರು ಅವನ ಮನೆಯನ್ನು ಹುಡುಕಿಕೊಂಡು.ಪಾಪ! ಏನು ಮಾಡು ಮಾಣಿಕ್ಯ ಮನೆ ಬಾಗಿಲು ಮುಚ್ಚಲ್ಪಟ್ಟಿತ್ತು. ಹಗಲು **12:00** ಘಂಟೆಯ ನಂತರ ಯಾರು ಒಳಗೆ ಪ್ರವೇಶಿಸಲು ಅನುಮತಿ ಇರಲಿಲ್ಲ. ಅದಾದನಂತರ ಅಂತ ಒಂದು ಒಳ್ಳೆ ಸಂಧರ್ಭ ಯಾರಿಗೆ ಮತ್ತೆ ಸಿಗಲೇ ಇಲ್ಲ.

ಇದನ್ನು ಓದುವ ನನ್ನು ಪ್ರೀಯರೆ! ಇಂದು ನಾವು ದೇವರಿಗೆ ವಿರೋಧವಾಗಿ ಪಾಪ ಮಾಡಿದರ ನಿಮಿತ ವ್ಯಾಧಿ, ಶಾಪ, ವೇದನೆ, ಕಣ್ಣೀರು, ಮರಣಗಳು ಸಾಲಗಳಾಗಿ ನಮ್ಮ ಕಡೆಗೆ ಹಾದು ಬರುತ್ತಿದೆ. ಇವುಗಳಿಂದ ಬಿಡಿಸಲು ನಿಮಗಾಗಿ ಒಬ್ಬನು ಮುಂದೇ ಬಂದಿದ್ದಾನೆ. ಆತನೇ ದೇವರಾದ ಯೇಸು ಕ್ರಿಸ್ತನು. ಈ ಪಾಪದ ಸಾಲದಿಂದ ನಮ್ಮನ್ನು ಬಿಡಿಸಿ,ಸಂತೋಷವಾದ ಜೀವನವನ್ನು ನೀಡುವದಕ್ಕಾಗಿಯೇ ಇಂದು ನಮ್ಮನ್ನು ಯೇಸು ಕರೆಯುತ್ತಾನೆ.

ನಾವು ಸಮಯವನ್ನು ತಳ್ಳಿಹಾಕದೇ ಇಂದೇ ಆತನ ಬಳಿಗೆ ಓಡಿ ಬನ್ನಿರಿ, ಈ ಒಂದು ಒಳ್ಳೇ ಸಮಯವನ್ನು ಬಿಟ್ಟುಬಿಡಬೇಡಿರಿ. ನಿಶ್ಚಯವಾಗಿ ಆತನು ನಮ್ಮ ಪಾಪಗಳನ್ನು ಕ್ಷಮಿಸಿ, ನಿಮ್ಮ ಅವಶ್ಯಕತೆಗಳನ್ನು ಸಂಧಿಸಿ, ನಿಮ್ಮನ್ನು ಒಳ್ಳೇದಾರಿಯಲ್ಲಿ ನಡೆಸುವನು.

*ಯೆಹೋವನು ಸಿಕ್ಕುವ ಕಾಲದಲ್ಲಿ ಆತನನ್ನು ಆಶ್ರಯಿಸಿ.*
*(ಯೆಶಾಯ 55:6)*

*ಯೆಹೋವನ ಕಡೆಗೆ ತಿರುಗಿಕೊಳ್ಳಿರಿ, ಬದುಕುವಿರಿ.*
*(ಆಮೋಸ 5:6)*


**VOICE OF JESUS PUBLICATIONS**
P.O.Box:6,Ramanathapuram.
623501. S.Inidia.
Phone: 98941 31211- 94423 22264
Email: vojpulication@gmail.com

**VOICE OF JESUS MEDIA**
P.O.Box:7206,Bangalore- 560 072.
Ph: 9731722977
Email: vojmedia@gmail.com


ಈ ಕರಪತ್ರಿಕೆಯನ್ನು ಉಚಿತವಾಗಿ ನೀಡಲಾಗುತ್ತದೆ ಮಾರಾಟ ಮಾಡುವುದಿಲ್ಲ

VOJ.TRACTS/2013/KANNADA